

# ಮಕ್ಕಳಲ್ಲಿ ಮೂಡಲಿ ಪರಿಸರಪ್ರೇಮ

**ಮಕ್ಕಳ ಪುಟ್ಟ ಮನಸ್ಸಿನಲ್ಲಿ ಪ್ರಕೃತಿಗೆ ಜಾಗ ಕಲ್ಪಿಸಬೇಕು. ಪರಿಸರದ ಮಹತ್ವ, ಸ್ವಚ್ಛತೆಯ ಪಾಠ ಬಾಲ್ಯದಲ್ಲೇ ಮೈಗೂಡಬೇಕು.**

■ ಸವಿತಾ ಮಾಧವ ಶಾಸ್ತ್ರಿ

ಒಂದು ಭಾನುವಾರ ಮಕ್ಕಳೊಂದಿಗೆ ನಮ್ಮೂರಿನ ಕಡಲತೀರದ ವಿಹಾರಕ್ಕೆ ಹೋದಾಗ ಪ್ರವಾಸಿಗರ ದಂಡೇ ನೆರೆದಿತ್ತು. ಜನ ಬೀಚಿನಲ್ಲಿ ಕುಳಿತು ತಾವು ತಂದಿದ್ದ ಚಿಪ್ಸ್, ಜ್ಯೂಸ್, ತಿಂಡಿ–ತಿನಿಸುಗಳನ್ನು ಆಸ್ವಾದಿಸುತ್ತಿದ್ದರು. ಇನ್ನೇನು ಕತ್ತಲಾಗುತ್ತಿದೆ ಎನ್ನುವಾಗ ಮೆಲ್ಲನೆ ತಾವು ಖಾಲಿ ಮಾಡಿದ ತಿನಿಸುಗಳ ಪ್ಲಾಸ್ಟಿಕ್ ಪ್ಯಾಕೆಟ್‌ಗಳು, ಜ್ಯೂಸ್ ಬಾಟಲಿಗಳನ್ನು ಸಮುದ್ರತೀರದ ಒಂದು ಮೂಲೆಯಲ್ಲಿ ಎಸೆದು ಹೋಗಲು ಶುರು ಮಾಡಿದರು.

ಸುಮಾರು ಹತ್ತು ಹನ್ನೆರಡು ವಯಸ್ಸಿನ ಒಬ್ಬ ಹುಡುಗ ಹೀಗೆ ಮೂಲೆಗೆ ಕಸ ಎಸೆದು ಮರಳಿ ಹೊರಟಾಗ ಅವರ ಗುಂಪಿನ ಹಿರಿಯ ಮಹಿಳೆಯೊಬ್ಬರು ಅವನನ್ನು ಹಿಂದಿಯಲ್ಲಿ ಗದರಿ, ಅವುಗಳನ್ನೆಲ್ಲ ವಾಪಸು ತರುವಂತೆ ಹೇಳಿ, ತಾನು ತಂದಿದ್ದ ಒಂದು ಬಟ್ಟೆ ಚೀಲದಲ್ಲಿ ತ್ಯಾಜ್ಯವನ್ನು ತುಂಬಿಸಿಕೊಂಡು ಹೊರಟರು. ಅದು ಆ ಹುಡುಗನ ತಾಯಿಗೆ ಸರಿ ಬರಲಿಲ್ಲ. ಆಕೆ ಈ ಮಹಿಳೆಯೊಂದಿಗೆ ವಾದಕ್ಕೆ ಇಳಿದರು. ದೂರದಲ್ಲಿದ್ದ ಕಸದ ರಾಶಿ ತೋರಿಸಿ– 'ಎಲ್ಲರೂ ಎಸೆದಿದ್ದಾರೆ. ನನ್ನ ಮಗನನ್ನು ಯಾಕೆ ಬಯ್ದು ಅವನ ಮೂಡ್ ಹಾಳು ಮಾಡಿದಿರಿ?' ಎಂದು ತಗಾದೆ ತೆಗೆದರು.

'ಎಲ್ಲರೂ ಮಾಡುತ್ತಾರೆಂದು ನಾವೂ ಹೀಗೆ ಹೋದಲ್ಲೆಲ್ಲ ಕಸ ಎಸೆಯುತ್ತಾ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ಪ್ರವಾಸಿತಾಣಗಳೆಲ್ಲ ತಿಪ್ಪೆಗುಂಡಿಗಳಾಗುತ್ತವೆ. ಈ ಸುಂದರ ಪ್ರದೇಶಗಳು ಉಳಿಯುವುದಿಲ್ಲ' ಎಂದು ಮಹಿಳೆ ತಮ್ಮ ನಿಲುವು ಸಮರ್ಥಿಸಿಕೊಂಡರು. ನನಗೂ ಆಕೆಯ ಉದ್ದೇಶ, ಕಾಳಜಿ ಸರಿಯೆನಿಸಿತು.

ಬಾಲ್ಯದಲ್ಲೇ ನಾವು ಮಕ್ಕಳಿಗೆ ಪರಿಸರವನ್ನು ಸ್ವಚ್ಛವಾಗಿಡುವುದರ ಬಗ್ಗೆ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಪೋಷಕರು ಕೆಲವು ಸಣ್ಣ ಕ್ರಮಗಳನ್ನು ಪಾಲಿಸಬೇಕು.

- ಮಕ್ಕಳು ಚಿಕ್ಕವರಿದ್ದಾಗಲೇ ಗಿಡಮರ, ನದಿ, ಕಡಲು, ಪರಿಸರದಿಂದಾಗುವ ಪ್ರಯೋಜನಗಳ ಬಗ್ಗೆ ಬಾಲಭಾಷೆಯಲ್ಲೇ ಹೇಳಬೇಕು.
- ನಮ್ಮ ಪರಿಸರ ಸ್ವಚ್ಛವಾಗಿದ್ದರೆ ರೋಗ ರುಜಿನಗಳು ಹರಡುವುದಿಲ್ಲ, ಹೀಗಾಗಿ ನಮ್ಮ ಸುತ್ತಲಿನ ಪ್ರದೇಶದಲ್ಲಿ ಕಸ ಎಸೆಯುವುದನ್ನು ನಿಲ್ಲಿಸಬೇಕು ಎಂಬುದನ್ನು ತಿಳಿಹೇಳಬೇಕು.
- ಮರುಬಳಕೆ ವಸ್ತುಗಳನ್ನು ಹೆಚ್ಚು ಬಳಸುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ, ಪೆನ್ನಿನ ಶಾಯಿ ಖಾಲಿಯಾದರೆ ಎಸೆಯುವ ಬದಲು, ಹೊಸ ರೀಫಿಲ್ ಹಾಕಿ ಬಳಸುವುದನ್ನು ಕಲಿಸಬೇಕು. ಹಿಂದಿನ ತರಗತಿಯ ನೋಟ್‌ಬುಕ್ ಹಾಳೆಗಳನ್ನು ಬೈಂಡ್ ಹಾಕಿಸಿ ಆ ಪುಸ್ತಕಗಳನ್ನು ಲೆಕ್ಕ ಬಿಡಿಸಲು ಬಳಸಬಹುದು. ಸ್ವಲ್ಪ ಸುಸ್ಥಿತಿಯಲ್ಲಿರುವ ಸ್ಕೂಲ್‌ಬ್ಯಾಗ್, ನೀರಿನ ಬಾಟಲಿ, ಬಟ್ಟೆಗಳನ್ನು ಬಡಮಕ್ಕಳಿಗೆ ಕೊಡಬಹುದು. ಇದರಿಂದ ವಸ್ತುಗಳ ಮರುಬಳಕೆ ಮಾತ್ರವಲ್ಲದೆ ತಮ್ಮ ವಸ್ತುಗಳನ್ನು ಇತರರಿಗೆ ಹಂಚುವ ಗುಣವನ್ನೂ ಮಕ್ಕಳು ಕಲಿಯುತ್ತಾರೆ.
- ಮನೆಯ ಸುತ್ತ ಖಾಲಿ ಜಾಗವಿದ್ದರೆ ಮಕ್ಕಳಿಂದಲೇ ಸಣ್ಣ ಪುಟ್ಟ ಗಿಡ ನೆಡಿಸಿ, ಅವುಗಳಿಗೆ ನೀರೆರೆದು ಪೋಷಿಸುವ ಕೆಲಸ ಮಾಡಿಸಬೇಕು. ಸ್ಥಳಾವಕಾಶ ಇಲ್ಲದಿದ್ದರೆ ಕುಂಡಗಳಲ್ಲಿ ಅವರಿಂದ ಹೂಗಿಡ, ತರಕಾರಿ ಬೀಜಗಳನ್ನು ಬಿತ್ತಿಸಿ, ಸಸಿಗಳು ಮೊಳಕೆಯೊಡೆಯುವ, ಗಿಡಗಳು ಬೆಳೆದು ಹೂ ಹಣ್ಣು ಬಿಡುವ ಪ್ರಕ್ರಿಯೆಗೆ ಅವರು ಸಾಕ್ಷಿಯಾಗುವಂತೆ ಮಾಡಬೇಕು. ಪ್ರಕೃತಿಯಲ್ಲಿ ನಡೆಯುವ ನೈಸರ್ಗಿಕ ಕ್ರಿಯೆಗಳಾದ ಬೀಜ ಮೊಳಕೆಯೊಡೆಯುವ ಕ್ರಿಯೆ, ಬೆಳವಣಿಗೆ, ದ್ಯುತಿ ಸಂಶ್ಲೇಷಣೆ, ಪರಾಗಸ್ಪರ್ಶ ಮುಂತಾದವುಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುತ್ತಾ ಹೋಗಬೇಕು. ಆಗ ಮಕ್ಕಳು ಪ್ರಕೃತಿಯೊಂದಿಗೆ ಬೆರೆಯುವುದರ ಜೊತೆಗೆ ಪರಿಸರ ಪಾಠವನ್ನೂ ಕಲಿಯುತ್ತಾರೆ.
- ಮಕ್ಕಳೊಂದಿಗೆ ಪ್ರವಾಸಕ್ಕೆ ಹೋಗಬೇಕಾದಾಗ ಹಸುರಿನಿಂದ ಕಂಗೊಳಿಸುವ ವನ್ಯಪ್ರದೇಶ, ನದಿ, ಜಲಪಾತ ಮುಂತಾದ ಸ್ಥಳಗಳನ್ನು ಆಯ್ದುಕೊಂಡು ಅವರು ಪ್ರಕೃತಿಯನ್ನು ಹೆಚ್ಚು ಹೆಚ್ಚು ಪ್ರೀತಿಸುವಂತೆ ಮಾಡಿ. ಎಲ್ಲಿ ಪ್ರವಾಸಕ್ಕೆ ಹೋದರೂ ಅಲ್ಲಿ ಕಸ ಎಸೆಯದಂತೆ, ಯಾವುದೇ ಮಾಲಿನ್ಯ ಮಾಡದಂತೆ ಎಚ್ಚರಿಕೆ ವಹಿಸಿ.
- ನಿಮ್ಮೂರಿನಲ್ಲಿ ಬೀಚ್, ಬೀದಿ ಮುಂತಾದ ಪ್ರದೇಶಗಳ ಸ್ವಚ್ಛತಾ ಕಾರ್ಯಕ್ರಮವನ್ನು ಸ್ವಯಂಸೇವಕರು ಹಮ್ಮಿಕೊಂಡಿದ್ದರೆ ನೀವೂ ಅದರಲ್ಲಿ ಪಾಲ್ಗೊಂಡು, ನಿಮ್ಮ ಮಕ್ಕಳನ್ನೂ ತೊಡಗುವಂತೆ ಮಾಡಿ. ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕವರ್ ಎಸೆದರೆ ಅವುಗಳನ್ನು ದನಗಳು, ಪಕ್ಷಿಗಳು ತಿಂದು ಅವುಗಳ ಪ್ರಾಣಕ್ಕೆ ಕುತ್ತಾಗುವ ಬಗ್ಗೆ ಎಚ್ಚರಿಕೆ ನೀಡಿ.
- ಕೆಲವು ಮಕ್ಕಳಿಗೆ ಚಿಟ್ಟೆ, ಕಪ್ಪೆ, ಕೀಟಗಳನ್ನು ಹಿಡಿದು ಸಂಭ್ರಮಿಸುವ ಅಭ್ಯಾಸವಿರುತ್ತದೆ. ಮಕ್ಕಳ ಇಂತಹ ಹಿಂಸಾವಿನೋದ ಪ್ರವೃತ್ತಿಗಳನ್ನು ತಡೆದು ಸಸ್ಯಗಳಿಗೆ, ಪ್ರಾಣಿಪಕ್ಷಿ ಹುಳುಹುಪ್ಪಟೆಗಳಿಗೂ ಜೀವವಿರುತ್ತದೆ, ಅವುಗಳಿಗೂ ನೋವಾಗುತ್ತದೆ ಎಂಬ ಅರಿವು ಮೂಡಿಸಬೇಕು.

ಬಾಲ್ಯದಲ್ಲಿ ಮಕ್ಕಳಿಗೆ ಪರಿಸರಪ್ರೀತಿ ಮೂಡಿಸುವುದು ಅತ್ಯಗತ್ಯ. ಏಕೆಂದರೆ ಎಲ್ಲರಿಗೂ ಇರುವುದೊಂದೇ ಭೂಮಿ ಅಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in